## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 391/2021

**ಸಾಕ್ಷಿಯನ್ನು ದಿಃ 10.07.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ರಘು | ಸಿ.ಡಬ್ಲ್ಯೂಃ **1** | ಪಿ.ಡಬ್ಲ್ಯೂಃ **2** |
| ತಂದೆಯ ಹೆಸರು | ಶೇಖರೇಗೌಡ | | |
| ವಯಸ್ಸು | **29** ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ಸುಮಾರು 3 ವರ್ಷಗಳ ಹಿಂದೆ ಸಂಜೆ 4.30 ರ ಸಮಯ ಚಿಕ್ಕಹುಣಸೂರಿನಲ್ಲಿ ನಾವು ಬಾಡಿಗೆ ಮನೆಯಲ್ಲಿ ವಾಸವಿದ್ದಾಗ 1,2 ನೇ ಆರೋಪಿತರು ನಮ್ಮ ಮನೆಯಲ್ಲಿ ಸ್ನಾನ ಮಾಡಲೆಂದು ನೀರು ಕಾಯಿಸಲು ಓಲೆ ಹಚ್ಚಿದಾಗ ಹೊಗೆ ಬರುತ್ತಿದ್ದ ವಿಚಾರಕ್ಕೆ 1,2 ನೇ ಆರೋಪಿತರು ಗಲಾಟೆ ಮಾಡಿದರು. 1 ನೇ ಆರೋಪಿ ಹೊಗೆ ಬರುತ್ತಿದೆ ಪೈಪು ಬದಲಾಯಿಸಲು ಚಾಸಾ-2 ನನ್ನ ಅತ್ತಿಗೆ ಬಳಿ ಜಗಳ ಮಾಡಿದರು. ಆಗ ನಾವು ಓನರ್ ಬಳಿ ಮಾತನಾಡಿ ನಾವು ಬಾಡಿಗೆಗೆ ಇದ್ದೇವೆ ಎಂದು ಹೇಳಿದೇವು. ಈ ವಿಚಾರಕ್ಕೆ ನಮ್ಮ ಓನರ್ ಪೈಪು ಅಳವಡಿಸಿಕೊಟ್ಟರು. ಮತ್ತೆ ಆರೋಪಿತರು ಮತ್ತೆ ಗಲಾಟೆ ಮಾಡಿದರು. ಗಲಾಟೆ ಸಮಯ ಓನರ್ ಬಳಿ ಮಾತನಾಡಿ ಎಂದು ಹೇಳಿದಾಗ 2 ನೇ ಆರೋಪಿ ಅವರ ಗಂಡನನ್ನು ಕರೆ ಮಾಡಿ ಕರೆಯಿಸಿದರು. ಆಗ 2 ನೇ ಆರೋಪಿ ಅವರ ಗಂಡ ನನ್ನನ್ನು ಮನೆಯಿಂದ ರಸ್ತೆಗೆ ಎಳೆದುಕೊಂಡು ಹೋದರು. ಅವರ ಜೊತೆ 4 ಜನ ಇದ್ದರು. 2 ನೇ ಆರೋಪಿ ಅವರ ಗಂಡ ಹಾಗೂ ಇನ್ನೊಬ್ಬರು ನನ್ನನ್ನು ಹಿಡಿದುಕೊಂಡು 2 ನೇ ಆರೋಪಿ ಅವರ ಗಂಡ ನನ್ನ ತಲೆಗೆ ಡಿಚ್ಚಿ ಹೊಡೆದರು. ಸದರಿಯವರ ಸ್ನೇಹಿತ ರಿಪೀಸ್ ಪಟ್ಟಿ ತೆಗೆದುಕೊಂಡು ನನ್ನ ಎಡಗೈ ಮೊಣಕೈಗೆ ಹಲ್ಲೆ ಮಾಡಿದರು. ಅವರ ಇನ್ನೊಬ್ಬ ಸ್ನೇಹಿತ ಬಂದು ನನ್ನ ಎಡಪಕ್ಕೆಗೆ ಗುದ್ದಿದರು. ಅಲ್ಲಿಯೆ ಇದ್ದ ನನ್ನ ಸ್ನೇಹಿತ ನದೀಮ್ ಚಾಸಾ-3 ರವರು ಬಂದು ಜಗಳ ಬಿಡಿಸಿದರು. ನಂತರ ನಾನು ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿರುತ್ತೇನೆ. ನಂತರ ನಾನು ಠಾಣೆಯಲ್ಲಿ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ದೂರನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ಗಲಾಟೆ ಸಮಯ 2 ನೇ ಆರೋಪಿ ಅವರ ಗಂಡ

ನಿನ್ನನ್ನು ಬಿಡುವುದಿಲ್ಲ ಎಂದು ಬೈದಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ–1 ರಿಂದ 3 ಅನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ 1,2 ನೇಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 3,4 ನೇ ಆರೋಪಿತರು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿಜೆ ಅವರಿಂದ–</u>**

2. ಗಲಾಟೆ ಆದ ಸಮಯ ನಾನು ವ್ಯವಸಾಯ ಮಾಡಿಕೊಂಡು ಕ್ಯಾಂಟೀನಲ್ಲಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ನಾವು ವಿ.ಪಿ.ಬೋರೆ, ಚಿಕ್ಕಹುಣಸೂರಿನಲ್ಲಿ ವಾಸವಾಗಿದ್ದೇವು. ದೂರನ್ನು ನಾನೇ ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ಆ ಸಮಯ ನನಗೆ ಕೈಗೆ ಏಟಾಗಿದ್ದರಿಂದ ದೂರನ್ನು ನಾನು ಬರೆಯಲಾಗಿಲ್ಲ. ನಾನು ಹೇಳಿದ ಮೇರೆಗೆ ಪೊಲೀಸರು ಬರೆದುಕೊಂಡಿರುತ್ತಾರೆ. ಗಲಾಟೆ ಆದ ದಿನಾಂಕ ನೆನಪಿಲ್ಲ. 4 ರಿಂದ 5 ಗಂಟೆ ಸಮಯದಲ್ಲಿ ಗಲಾಟೆ ಆಗಿರುತ್ತದೆ. ಜಗಳ ಆದ ದಿನ ನಾನು ದೂರನ್ನು ನೀಡಿರುತ್ತೇನೆ.

3. ಚಾಸಾ–2 ನನ್ನ ಅತ್ತಿಗೆ. ಗಲಾಟೆ ಆದ ಸಮಯ ನಾನು, ನನ್ನ ಅತ್ತಿಗೆ ನನ್ನ ತಂಗಿ ಇದ್ದೇವು. ಗಲಾಟೆ ಆದ ಸಮಯ ಮೊದಲು 1,2 ನೇ ಆರೋಪಿತರು ಜಗಳ ಮಾಡುತ್ತಿದ್ದರು. ನಂತರ 2 ನೇ ಆರೋಪಿ ಕರೆ ಮಾಡಿ ತನ್ನ ಗಂಡ ಹಾಗೂ ಅವರ ಸ್ನೇಹಿತರನ್ನು ಕರೆದಿರುತ್ತಾರೆ. 2 ನೇ ಆರೋಪಿಯ ಗಂಡನ ಜೊತೆ ಒಟ್ಟು 4 ಜನ ಕಾರಿನಲ್ಲಿ ಬಂದಿದ್ದರು. ಅವರೆಲ್ಲಾ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ನನ್ನ ಹೇಳಿಕೆಯಲ್ಲಿ 3,4 ನೇ ಆರೋಪಿತರು ಮಾತ್ರ ಹಲ್ಲೆ ಮಾಡಿದ್ದಾರೆ ಎಂದು ಹೇಳಿದ್ದು, ಈಗ ಎಲ್ಲಾರು ಗಲಾಟೆ ಮಾಡಿದ್ದರು ಎಂದು ಹೇಳುತ್ತಿದ್ದು ಅಂದರೆ ಆ ಹೇಳಿಕೆ ಸುಳ್ಳು ಎಂಬ ಪ್ರಶ್ನೆಗೆ ನಿಜಾ ಎಂದು ಸಾಕ್ಷಿ ನುಡಿಯುತ್ತಾರೆ.

4. ಗಲಾಟೆ ಸಮಯ ನನ್ನ ಎಡಗಣ್ಣಿಗೆ, ಎಡಕೈ, ಎಡಪಕ್ಕೆಗೆ ಏಟಾಗಿತ್ತು. ಆರೋಪಿತರು ನನ್ನ ಜೊತೆ ಗಲಾಟೆ ಮಾಡಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–2 ರವರು ಇದೇ ತರಹ ತುಂಬಾ ಜನರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.